# ಕರ್ಮವೊಂದು ಆಧ್ಯಾತ್ಮಿಕ ಸಾಧನೆ

**ಸ್ವಾಮಿ ಭಜನಾನಂದ**

**ಸ್ವಾಮಿ ಭಜನಾನಂದರು ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳೂ ಸಹಕಾರ್ಯದರ್ಶಿಗಳೂ ಆಗಿದ್ದಾರೆ. ಅವರು ಈ ಹಿಂದೆ ಸಂಘದ ಆಂಗ್ಲಪತ್ರಿಕೆಯಾದ "ಪ್ರಬುದ್ಧಭಾರತ"ದ ಸಂಪಾದಕರಾಗಿದ್ದರು. ಆ ಸಂದರ್ಭದಲ್ಲಿ ಅವರು ಬರೆಯುತ್ತಿದ್ದ ಸಂಪಾದಕೀಯಗಳು ಅವರ ಅಪಾರ ವಿದ್ವತ್ತನ್ನೂ ಆಳ ಆಧ್ಯಾತ್ಮಿಕ ಒಳನೋಟವನ್ನೂ ಒಳಗೊಂಡಿದ್ದು ಅನೇಕರಿಗೆ, ವಿಶೇಷವಾಗಿ ಆಧ್ಯಾತ್ಮಿಕ ಸಾಧಕರಿಗೆ, ಮಾರ್ಗದರ್ಶಕವಾಗಿ ಮೆಚ್ಚುಗೆಯನ್ನು ಪಡೆದಿವೆ. ಕರ್ಮಯೋಗ ಸಾಧನೆಗೆ ಸಂಬಂಧಿಸಿದ ಈ ಸಂಪಾದಕೀಯವನ್ನು ಅನುವಾದಿಸಿದವರು ಕುಮಾರಿ ಸ್ವರ್ಣಗೌರಿ.**

## ಸಿಸಿಫಸ್‌ನ ಅವ್ಯಾಹತ ಕಾರ್ಯ

ಗ್ರೀಕರ ಪುರಾಣದಲ್ಲಿ ಕುತೂಹಲಕಾರಿ ವ್ಯಕ್ತಿಯೊಬ್ಬನ ಕಥೆಯಿದೆ. ಆ ವ್ಯಕ್ತಿಯೇ ಈಯೋಲಸ್ (Aeolus)ನ ಮಗನೂ, ಕೊರಿಂತ್ (Corinth) ದೇಶದ ರಾಜನೂ ಆದ ಸಿಸಿಫಸ್. ಆತನು ಎಂತಹ ಕುಹಕ ವ್ಯಕ್ತಿಯೆಂದರೆ ದೇವತೆಗಳನ್ನೇ ಪದೇ ಪದೇ ಮೋಸಗೊಳಿಸಿ ಒಮ್ಮೆ ಮೃತ್ಯುದೇವತೆಯನ್ನೇ ಬಂಧಿಸಿಬಿಟ್ಟ! ಕೊನೆಗೆ ದೇವತೆಗಳೆಲ್ಲಾ ಸೇರಿ ಅವನನ್ನು ನರಕಕ್ಕೆ ಕಳುಹಿಸುವಲ್ಲಿ ಯಶಸ್ವಿಯಾದರು. ಆತನ ದುಷ್ಟ ಕಾರ್ಯಗಳಿಗೆಲ್ಲಾ ತಕ್ಕ ಶಿಕ್ಷೆಯೆಂದು ಒಂದು ದೊಡ್ಡ ಬಂಡೆಯನ್ನು ಉರುಳಿಸಿಕೊಂಡು ಬೆಟ್ಟದ ತುದಿಯನ್ನು ತಲುಪಿಸುವ ಕೆಲಸವನ್ನು ಕೊಟ್ಟರು. ಪಾಪ! ಆದರಾತನು ಪ್ರತಿ ಬಾರಿ ಬೆಟ್ಟದ ತುದಿಯನ್ನು ತಲಪುವುದರೊಳಗೆ ಕಲ್ಲು ಬಂಡೆಯು ಉರುಳುತ್ತಾ ಬೆಟ್ಟದ ಕೆಳಗೆ ಬಂದುಬಿಡುತ್ತದೆ. ಹೀಗೆ ಅವನು ಇನ್ನೂ ಗುರಿಮುಟ್ಟುವುದರಲ್ಲಿಯೇ ವ್ಯರ್ಥವಾಗಿ ಕಾಲ ಕಳೆಯುತ್ತಿರುವನಂತೆ.

> **ಕೆಲಸವು ಅರ್ಥಪೂರ್ಣವಾಗಬೇಕಾದರೆ ಅದು ಉನ್ನತ ಅನುಭವಗಳಿಗೆ ಹಾಗೂ ನಮ್ಮ ಆಂತರಿಕ ಉತ್ಕಾಂಕ್ಷೆಗಳನ್ನು ಹೊರಗೆಡಹುವ ಸಾಧನವಾಗಬೇಕು.**

ಸಿಸಿಫಸ್‌ನ ಕಾರ್ಯದಂತೆ ಎಂದೆಂದಿಗೂ ಮುಗಿಯದ ಕೆಲಸಕಾರ್ಯಗಳಿಂದ ಕೂಡಿದ ನಮ್ಮ ಜೀವನವೂ ವ್ಯರ್ಥ ಎಂದೆನಿಸುವುದಿಲ್ಲವೇ? ಪ್ರತಿದಿನವೂ ಕೆಲಸ ಮಾಡುತ್ತೇವೆ, ಆದರೆ ಎಲ್ಲಿಯೂ ತಲುಪಿದಂತೆಯೇ ಕಾಣುವುದಿಲ್ಲ. ನಮ್ಮ ಹೃದಯವು ಆ ಪರಮ ಶಾಂತಿ, ಶಾಶ್ವತ ಸುಖ, ಆನಂದಗಳಿಗಾಗಿ ಹಂಬಲಿಸುವುದು ಮತ್ತು ಅದಕ್ಕಾಗಿ ನಾವು ಶ್ರಮ ಪಡುತ್ತೇವೆ. ಆದರೆ ಸಫಲತೆಯು ಕೈಗೆಟುಕದ ವಸ್ತುವಾಗಿಯೇ ಉಳಿದಿದೆ ಮತ್ತು ನಮ್ಮ ನೀರಸವೂ, ಬೇಸರವೂ ಆದ ಕಾರ್ಯಗಳಿಂದ ತಪ್ಪಿಸಿಕೊಳ್ಳಲು ಹೊಸ ಹೊಸ ವಿಹಾರಗಳನ್ನು ಅರಸುತ್ತೇವೆ. ನಮ್ಮ ಕರ್ಮದ ಏಕೈಕ ಗುರಿಯು ಕೆಲಸದಿಂದ ತಪ್ಪಿಸಿಕೊಳ್ಳುವುದು ಹಾಗೂ ವಿರಾಮವನ್ನು ಅರಸುವುದು. ಆದರೆ ಈ ನಮ್ಮ ಕ್ರೀಡಾ ವಿಹಾರಗಳೆಲ್ಲಾ ನಿಜವಾದ ಸಫಲತೆಯನ್ನು ನೀಡಲಾರದೆಂದು ಬಹುಬೇಗನೆ ವೇದ್ಯವಾಗುವುದು. ಸಾಧಾರಣವಾಗಿ ಕರ್ಮವೇ ಸಫಲತೆಯನ್ನು ನೀಡುವುದು. ಆದರೆ ಹೆಚ್ಚಿನ ವೇಳೆ, ಅದು ಜೀವನದ ಅರ್ಥಹೀನತೆ ಅಥವಾ ಶೂನ್ಯತೆಯನ್ನು ಸೂಚಿಸುವುದು.

ಆಧುನಿಕ ಕಾಲದಲ್ಲಿ ತೀವ್ರವಾಗುತ್ತಿರುವ ಮಾನವನ ಈ ವಿಷಮ ಪರಿಸ್ಥಿತಿಗೆ ಕಾರಣವೇನು? ಉತ್ತರವೇನೆಂದರೆ ಪ್ರತಿಯೊಬ್ಬ ಸುಸಂಸ್ಕೃತ ನಾಗರಿಕನಿಗೂ "ಮೌಲ್ಯ"ಗಳೆಂಬ ಉನ್ನತವಾದ ಮತ್ತು ಜೈವಿಕ ಅಸ್ತಿತ್ವವನ್ನು ಮೀರಿದ ಆವಶ್ಯಕತೆಗಳಿವೆ. ಕೇವಲ ಕರ್ಮ ಅಥವಾ ಕರ್ಮವನ್ನು ಮಾಡುವ ವಿಧಾನ ಈ ಆವಶ್ಯಕತೆಗಳನ್ನು ತೃಪ್ತಿಗೊಳಿಸಲಾರವು. ಸತ್ಯ, ಒಳ್ಳೆಯತನ ಹಾಗೂ ಸುಂದರವಾದುದನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುವ ಸ್ವಭಾವಸಿದ್ಧ ಉತ್ಕಾಂಕ್ಷೆಯು ನಮ್ಮೆಲ್ಲರಲ್ಲೂ ಇದೆ ಮತ್ತು ಇವುಗಳನ್ನು ಜ್ಞಾನ, ಪ್ರೀತಿ ಹಾಗೂ ಕಲೆಗಳ ಮೂಲಕ ವ್ಯಕ್ತಪಡಿಸಲು ಪ್ರಯತ್ನಿಸುತ್ತೇವೆ. ಕೆಲಸವು ಅರ್ಥಪೂರ್ಣವಾಗಬೇಕಾದರೆ ಅದು ಉನ್ನತ ಅನುಭವಗಳಿಗೆ ಹಾಗೂ ನಮ್ಮ ಆಂತರಿಕ ಉತ್ಕಾಂಕ್ಷೆಗಳನ್ನು ಹೊರಗೆಡಹುವ ಸಾಧನವಾಗಬೇಕು.

ಕಾರ್ಖಾನೆಯಲ್ಲಿ ಕೆಲಸ ಮಾಡುವ ಒಬ್ಬ ಕಾರ್ಮಿಕನು ತಾನು ದಿನ ನಿತ್ಯ ಮಾಡುವ ಕೆಲಸವನ್ನು ಕೇವಲ ಆಹಾರ ವಿಹಾರಗಳನ್ನು ಗಳಿಸುವ ದೃಷ್ಟಿಯಿಂದ ಮಾಡುವನು. ಆ ಕೆಲಸವು ಅವನದಲ್ಲ; ಅವನ ಯಜಮಾನನದು. ಕೆಲಸ ಮಾಡುವಾಗ ಅವನು ತನ್ನಿಂದ ತಾನು ದೂರವಾಗುವನು. ತನ್ನಿಚ್ಛೆಯ, ತನ್ನ ರಚನಾತ್ಮಕತೆಯನ್ನು ಹೊರಗೆಡಹುವ ಹಾಗೂ ತನ್ನನ್ನು ತನ್ನೊಡನೆ ಒಂದಾಗಿಸುವಂತಹ ಯಾವುದಾದರೂ ಕಾರ್ಯವನ್ನು ಮಾಡಲು ಸದಾ ಹಾತೊರೆಯುತ್ತಿರುತ್ತಾನೆ. ಅದಕ್ಕಾಗಿ ಅವನು ವಿರಾಮವನ್ನು ಬಯಸುತ್ತಾನೆ. ಆದರೆ ನೈಜ ಕಲಾಕಾರನ ಅಥವಾ ಶ್ರೇಷ್ಠ ವಿಜ್ಞಾನಿಯ ಕತೆಯೇ ಬೇರೆ, ಅವನ ಪಾಲಿಗೆ ಕರ್ಮವು ಕೇವಲ ಜೀವನೋಪಾಯವಲ್ಲ. ತನ್ನ ಆಂತರಿಕ, ನೈಜ, ರಚನಾತ್ಮಕತೆಯ ಒಂದು ಅಭಿವ್ಯಕ್ತಿಯೂ ಹೌದು. ಇಲ್ಲಿ ವ್ಯಕ್ತಿಯು ಕರ್ಮದ ಮೂಲಕ ತನ್ನಿಂದ ತಾನು ದೂರವಾಗದ ಕಾರಣ ಇಂತಹವರಿಗೆ ಕಡಿಮೆ ವಿಹಾರ ಹಾಗೂ ವಿಶ್ರಾಂತಿಗಳು ಸಾಕು. ಕರ್ಮವೇ ಅವರನ್ನು ಪರಿಪೂರ್ಣತೆಯೆಡೆಗೆ ಒಯ್ಯುವುದು.

ಈ ಕೆಲಸದ ಹಾಗೂ ಆತ್ಮ-ಪರಕೀಯತೆಯ ಸಮಸ್ಯೆಯು ಆಧ್ಯಾತ್ಮಿಕ ಜೀವನದಲ್ಲಿ ಇನ್ನೂ ಹೆಚ್ಚಿನ ಮಹತ್ತ್ವವನ್ನು ಪಡೆಯು

ವುದು. ಆಧ್ಯಾತ್ಮಿಕ ಜೀವನವೆಂದರೆ ಆತ್ಯಂತಿಕ ಸತ್ಯಕ್ಕೆ ಸಾಧಕನು ಸಂಪೂರ್ಣವಾಗಿ ಸ್ಪಂದಿಸುವುದು. ಜೀವನದ ಒಂದು ಭಾಗವನ್ನು ಪೂರ್ಣದಿಂದ ಪ್ರತ್ಯೇಕಿಸಿ, ಉಳಿದ ಭಾಗದೊಡನೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಅವನ್ನು ತೊಡಗಿಸಿದರೆ ಅವನ ಸ್ಪಂದಿಸುವಿಕೆಯು ಸಂಪೂರ್ಣವಾಗುವುದಿಲ್ಲ. ಆಧ್ಯಾತ್ಮಿಕ ಜೀವನದ ಮುಖ್ಯ ಹೋರಾಟವೇ ಉನ್ನತ ಪ್ರಜ್ಞಾಸ್ತರವನ್ನು ತಲುಪುವುದು. ಇದು ಸಫಲವಾಗಬೇಕಾದರೆ ನಮ್ಮ ವ್ಯಕ್ತಿತ್ವವು ಪೂರ್ಣ ಸಮಗ್ರತೆಯಿಂದ ಕೂಡಿರಬೇಕು ಹಾಗೂ ಪ್ರತಿಯೊಂದು ಕಾರ್ಯವೂ ಈ ಹೋರಾಟಕ್ಕೆ ನೇರವಾಗಿ ಸಂಬಂಧಿಸಿರಬೇಕು. ಮಾನಸಿಕ ಹಾಗೂ ಭೌತಿಕ ಶಕ್ತಿಯನ್ನು ಪಳಗಿಸಿ ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ತೊಡಗಿಸಿದಾಗ ಮಾತ್ರವೇ ಆತ್ಮಶಕ್ತಿಯು ತನಗೆ ಇದಿರಾಗುವ ವಿಘ್ನಗಳನ್ನೆಲ್ಲಾ ನುಚ್ಚು ನೂರುಗೊಳಿಸಿ ಉನ್ನತ ಪ್ರಜ್ಞಾಸ್ತರದ ಕೋಟೆಯನ್ನು ಭೇದಿಸಲು ಸಾಧ್ಯ.

ಕರ್ಮ ಯಾವುದೇ ಆಗಿರಲಿ, ಅದೊಂದು ಆಧ್ಯಾತ್ಮಿಕ ಸಾಧನವಾಗಬೇಕು; ಇಲ್ಲದಿದ್ದರೆ ಅದು ಆತ್ಮದ ಅವನತಿಗೆ ಕಾರಣವಾಗುವುದು ಹಾಗೂ ಆಧ್ಯಾತ್ಮಿಕ ಸಂಪತ್ತಿನ ವ್ಯರ್ಥ ವ್ಯಯವಾಗುವುದು. ಹೆಚ್ಚಾಗಿ ಆಧುನಿಕ ಯುಗದಲ್ಲಿ ಕರ್ಮ ಒಂದು ಅನಿವಾರ್ಯ ಸಾಮಾಜಿಕ ಆವಶ್ಯಕತೆಯಾಗಿರುವಾಗ ಆಧ್ಯಾತ್ಮಿಕ ಅನ್ವೇಷಣೆಯ ಸಫಲತೆಯು ಕರ್ಮವನ್ನು ಅದರೊಡನೆ ಸಂಯೋಜಿಸುವುದನ್ನು ಹೆಚ್ಚಾಗಿ ಅವಲಂಬಿಸಿದೆ. ಆಧ್ಯಾತ್ಮಿಕ ಸಾಧಕನ ಗುರಿಯು ಕಲಾಕಾರನ ಅಥವಾ ವಿಜ್ಞಾನಿಯ ಗುರಿಗಿಂತ ಉನ್ನತವಾದುದು. ಕರ್ಮವು ಆಧ್ಯಾತ್ಮಿಕ ವ್ಯಾಕುಲತೆಯ ಅಭಿವ್ಯಕ್ತಿಗೆ ಹಾಗೂ ಪ್ರಜ್ಞಾತೀತ ಅನುಭವಗಳಿಗೆ ಮಾಧ್ಯಮವಾಗಬಲ್ಲುದೇ? ಒಂದೆಡೆ ಸಾಧಕನು ತನ್ನ ದೈಹಿಕ ಪೋಷಣೆ ಹಾಗೂ ಸಾಮಾಜಿಕ ಕಟ್ಟುಪಾಡುಗಳಿಗಾಗಿ ಕೆಲಸ ಮಾಡಬೇಕು, ಮತ್ತೊಂದೆಡೆ ದೈಹಿಕ ಹಾಗೂ ಸಾಮಾಜಿಕ ಮಿತಿಗಳನ್ನು ಮೀರಲೂಬೇಕು. ಈ ಎರಡೂ ಹೋರಾಟಗಳನ್ನು ಸಮನ್ವಯಗೊಳಿಸಬಹುದೇ? ಪ್ರತಿಯೊಬ್ಬ ಸಾಧಕನೂ ತಾನೇ ಸ್ವತಃ ಶ್ರಮಿಸಿ ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿದುಕೊಳ್ಳಬೇಕು. ಬಹಳ ಹಿಂದಿನಿಂದಲೂ ಈ ವಿಷಯವು ಅತ್ಯಂತ ಶ್ರೇಷ್ಠ ಜ್ಞಾನಿಗಳ ಗಮನವನ್ನು ಸೆಳೆದಿದೆ. ಅವರುಗಳ ಅಭಿಪ್ರಾಯಗಳನ್ನು ಮೊದಲು ಪರಿಶೀಲಿಸಿ ನಂತರ ಈ ಪ್ರಶ್ನೆಗಳನ್ನು ಪುನಃ ಪರಿಶೀಲಿಸೋಣ.

## ಪ್ರವೃತ್ತಿ ಮತ್ತು ನಿವೃತ್ತಿ : ಕರ್ಮ ಮತ್ತು ಕರ್ಮಯೋಗ

ಪ್ರಾಚೀನ ಕಾಲದಿಂದಲೂ ಹಿಂದೂಧರ್ಮವು ಎರಡು ರೀತಿಯ ಜೀವನಕ್ರಮವನ್ನು ಅಂಗೀಕರಿಸಿದೆ : ಧರ್ಮ ಅಥವಾ ಪ್ರವೃತ್ತಿ ಮಾರ್ಗ, ಮುಕ್ತಿ ಅಥವಾ ನಿವೃತ್ತಿ ಮಾರ್ಗ. ತನ್ನ ಸ್ವಭಾವ ಹಾಗೂ ಶಕ್ತ್ಯನುಸಾರ ಒಬ್ಬನು ತನ್ನ ಮಾರ್ಗವನ್ನು ಆರಿಸಿಕೊಳ್ಳಬಹುದು. ಇವೆರಡರ ವ್ಯತ್ಯಾಸವು ಅವುಗಳ ಗುರಿಯಲ್ಲಿದೆ—ಮೊದಲನೆಯದರಲ್ಲಿ ವಿಷಯಸುಖ ಮತ್ತು ಎರಡನೆಯದರಲ್ಲಿ ಭಗವಂತನ ಸಾಕ್ಷಾತ್ಕಾರ, ಮುಕ್ತಿ ಅಥವಾ ಜನನ ಮರಣಗಳ ಚಕ್ರದಿಂದ ವಿಮುಕ್ತಿ. ಎರಡರಲ್ಲೂ ಕರ್ಮಕ್ಕೆ ಸ್ಥಾನವುಂಟು. ಒಂದರಲ್ಲಿ ಕೆಲಸವೇ ಪ್ರಧಾನ, ಮತ್ತೊಂದರಲ್ಲಿ ಅದು ಗೌಣ.

ಪ್ರವೃತ್ತಿ ಮಾರ್ಗದಲ್ಲಿ ಮಾಡುವ ಒಳ್ಳೆಯ ಕರ್ಮಗಳು ಸಾಧಾರಣವಾಗಿ ಎರಡು ಬಗೆ; ಇಷ್ಟಾ—ವೈದಿಕ ನಿತ್ಯ ಕರ್ಮಗಳು ಮತ್ತು ಪೂರ್ತಮ್—ಬಾವಿ ತೋಡಿಸುವುದು ಮುಂತಾದ ಸೇವಾ ಕಾರ್ಯಗಳು. ಈ ಎರಡು ರೀತಿಯ ಕರ್ಮಗಳನ್ನೂ ಒಂದು ನಿರ್ದಿಷ್ಟ ಗುರಿಯಿಂದ ಮಾಡಲಾಗುತ್ತದೆ; ಆ ಗುರಿಯೇ ಮರಣಾನಂತರದ ಸ್ವರ್ಗಪ್ರಾಪ್ತಿ ಮತ್ತು ಈ ಜನ್ಮ ಹಾಗೂ ಜನ್ಮಾಂತರಗಳಲ್ಲಿ ಒಳ್ಳೆಯ ಜೀವನ. ನಿವೃತ್ತಿ ಮಾರ್ಗದಲ್ಲಿ ಮಾಡುವ ಕರ್ಮ ಇಂತಹ ಉದ್ದೇಶಗಳಿಂದ ಪ್ರೇರಿತವಲ್ಲ. ಅದನ್ನೇ ಕರ್ಮಯೋಗವೆಂದು ಕರೆಯುವೆವು; ಅದರ ಗುರಿ ಕೇವಲ ಮುಕ್ತಿ. ಕರ್ಮ ಹಾಗೂ ಕರ್ಮಯೋಗದ ನಡುವಿನ ಈ ವ್ಯತ್ಯಾಸವನ್ನು ತಿಳಿಯುವುದು ಅತ್ಯಂತ ಆವಶ್ಯಕ. ಸ್ವಾಮಿ ವಿವೇಕಾನಂದರು ಹೇಳುವಂತೆ, **"ಎಲ್ಲ ಕ್ರಿಯೆಗಳೂ ಸ್ವಾತಂತ್ರ್ಯಕ್ಕಾಗಿ ಮಾಡುವ ಹೋರಾಟಗಳೇ. ಆದರೆ ಎಲ್ಲ ಕರ್ಮಗಳೂ ಆ ಗುರಿಯೆಡೆಗೆ ಕರೆದೊಯ್ಯವು."**

ನಿಃಸ್ವಾರ್ಥ ಅಥವಾ ವೈರಾಗ್ಯ ಕೇವಲ ಕರ್ಮಯೋಗದ ವೈಶಿಷ್ಟ್ಯವಲ್ಲ. ಅದು ಜ್ಞಾನಯೋಗ ಹಾಗೂ ಭಕ್ತಿಯೋಗಗಳಿಂದಲೂ ಕೂಡಿರುವ ಇಡೀ ನಿವೃತ್ತಿ ಮಾರ್ಗದ ಲಕ್ಷಣ. ಆಧುನಿಕ ಯುಗದಲ್ಲಿ ಹೆಚ್ಚು ಪ್ರಾಮುಖ್ಯವನ್ನು ಪಡೆದಿರುವ ಒಂದು ಪ್ರಶ್ನೆ ಇಲ್ಲಿ ಉದ್ಭವಿಸುವುದು: ಕರ್ಮಯೋಗವು ನೇರವಾಗಿ ಮುಕ್ತಿಯನ್ನು ನೀಡುವುದೇ? ಕೆಲವೇ ಮೀಮಾಂಸಕರ ಹೊರತು ಹಿಂದೂಧರ್ಮದ ಉಳಿದೆಲ್ಲಾ ಆಧ್ಯಾತ್ಮಿಕ ಆಚಾರ್ಯರೂ ಇಲ್ಲವೆನ್ನುತ್ತಾರೆ. ಅವರ ಪ್ರಕಾರ, ಕರ್ಮಯೋಗವು ಕೇವಲ ಒಂದು ನೈತಿಕ ಸಿದ್ಧತೆ, ಮೂರು ಯೋಗಗಳಿಗಿಂತಲೂ ಅದು ಗೌಣವಾದುದು. ಹೆಚ್ಚೆಂದರೆ, ಅದು ಕೇವಲ ಚಿತ್ತಶುದ್ಧಿಯನ್ನು ನೀಡಬಲ್ಲುದು. ಈ ಪೂರ್ವಾಚಾರ್ಯ ಸಂಪ್ರದಾಯದ ವಿರುದ್ಧವಾಗಿ ಸ್ವಾಮಿ ವಿವೇಕಾನಂದರು ಕರ್ಮಯೋಗವೂ ನೇರವಾಗಿ ಮುಕ್ತಿಗೆ ಕೊಂಡೊಯ್ಯುವುದು ಎಂದು ಪ್ರತಿಪಾದಿಸುತ್ತಾರೆ ಎಂದು ನಂಬಲಾಗಿದೆ. ಈ ಅಭಿಪ್ರಾಯವನ್ನು ಕೂಲಂಕಷವಾಗಿ ಪರಿಶೀಲಿಸೋಣ.

## ಶ್ರೀಶಂಕರರು ಮತ್ತು ಕರ್ಮಯೋಗ

ಶ್ರೀಶಂಕರರ ಜೀವನಕ್ಕೆ ಎರಡು ಧ್ಯೇಯಗಳಿದ್ದವು. ಒಂದು ಅದ್ವೈತ ಸಿದ್ಧಾಂತದ ಶ್ರೇಷ್ಠತೆಯನ್ನು ಸಾರುವುದು. ಅದ್ವೈತ ಸಿದ್ಧಾಂತದಲ್ಲಿ ಬ್ರಹ್ಮವೊಂದೇ ಸತ್ಯ ಮತ್ತು ಅದು ಅನಂತ, ನಿರ್ವಿಕಾರ ಹಾಗೂ ಭೇದರಹಿತ. ಬ್ರಹ್ಮ ಸಾಕ್ಷಾತ್ಕಾರದಿಂದಲೇ ಮುಕ್ತಿ ಮತ್ತು ಇದೇ ಶಂಕರರ ಅಭಿಪ್ರಾಯದಲ್ಲಿ ಜ್ಞಾನ. ಕರ್ಮವೆಂದರೆ ಬದಲಾವಣೆ ಹಾಗೂ ಚಲನೆಗಳುಳ್ಳ ಪರಿಮಿತ ವಸ್ತುಗಳೊಡನೆ ಸಂಪರ್ಕವಾದ್ದರಿಂದ ಬ್ರಹ್ಮದೊಡನೆ ಅದಕ್ಕೆ ಸಂಬಂಧವಿಲ್ಲ. ಅದ್ವೈತ ಜ್ಞಾನಕ್ಕಿಂತ ಭಿನ್ನವಾಗಿ ಕರ್ಮವು ಜ್ಞಾತೃ, ಜ್ಞೇಯ, ಕ್ರಿಯೆ, ಫಲ ಮುಂತಾದವುಗಳಿಂದ ಕೂಡಿದೆ. ಶಂಕರರ ಮತಾನುಸಾರ ಕರ್ಮ ಕೇವಲ ಮಾಯೆ ಅಥವಾ ಅಜ್ಞಾನದ ಫಲ. ಆದ್ದರಿಂದ ಅದು ಬ್ರಹ್ಮ

ಸಾಕ್ಷಾತ್ಕಾರವನ್ನು ನೀಡದು. ಸಾಕ್ಷಾತ್ಕಾರವು ಯಾವ ಸಾಂತ ವಿಷಯಗಳನ್ನೂ ಆಧರಿಸಿಲ್ಲ.

ಅದ್ವೈತದ ಶ್ರೇಷ್ಠತೆಯನ್ನು ಸಾರುವಲ್ಲಿ ಇರುವ ಅತಿ ಮುಖ್ಯ ಅಡಚಣೆಯೆಂದರೆ ಜ್ಞಾನವು ಮೋಕ್ಷವನ್ನು ನೀಡಲಾರದು ಎಂಬ ಮೀಮಾಂಸಕರ ಧೋರಣೆ. ಪ್ರಾಭಾಕರರು ಮೋಕ್ಷವೆಂದರೆ ಪಾಪ ಮತ್ತು ಪುಣ್ಯಗಳು ನಿಶ್ಶೇಷವಾಗಿ ಹೊರಟುಹೋಗುವುದರ ಮೂಲಕ ದೇಹದ ಸಂಪೂರ್ಣ ನಾಶ —**ಆತ್ಯಂತಿಕಸ್ತು ದೇಹೋಚ್ಛೇದೋ ನಿಃಶೇಷ ಧರ್ಮಾಧರ್ಮಪರಿಕ್ಷಯ ನಿಬಂಧನೋ ಮೋಕ್ಷಃ |** — ಎನ್ನುತ್ತಾರೆ. ಕುಮಾರಿಲರ ಅಭಿಪ್ರಾಯದಲ್ಲಿ ಜ್ಞಾನವು ಕೇವಲ ಕರ್ಮದ ಸ್ಥೂಲಾವಸ್ಥೆಯನ್ನು ನಾಶಗೊಳಿಸುವುದೇ ವಿನಃ ಸೂಕ್ಷ್ಮಾವಸ್ಥೆಯನ್ನಲ್ಲ. (ನೋಡಿ, **ಶ್ಲೋಕವಾರ್ತಿಕ**, ಸಂಬಂಧಾಕ್ಷೇಪ ಪರಿಹಾರ, ೯೪,೯೫, ೯೬ ಮತ್ತು ೧೦೧). ಜನ್ಮ ಜನ್ಮಾಂತರಗಳ ಸಂಚಿತ ಕರ್ಮಫಲವು ಸೂಕ್ಷ್ಮಾವಸ್ಥೆಯಲ್ಲಿದೆ, ಹಾಗೂ ಎಷ್ಟೇ ಜನ್ಮಗಳಾದರೂ ಕರ್ಮವನ್ನು ಮಾಡುತ್ತಲೇ ಅದನ್ನು ನಿಶ್ಶೇಷಗೊಳಿಸಬೇಕು. ಆದರೆ ಆ ಕರ್ಮ ಹೊಸ ಕರ್ಮಫಲವನ್ನು ನೀಡದಿರಬೇಕಾದರೆ ಅದನ್ನು ನಿಷ್ಕಾಮ ಭಾವದಿಂದ ಮಾಡಬೇಕು. ಅವರ ಪ್ರಕಾರ, ಮನಸ್ಸಿನ ಪರಿಶುದ್ಧತೆಗಾಗಿ ನಿಷ್ಕಾಮ ಕರ್ಮವಲ್ಲ; ಅದರ ಏಕಮಾತ್ರ ಉದ್ದೇಶವೇ ಹೊಸ ಕರ್ಮಗಳು ಸಂಚಯವಾಗದಂತೆ ತಡೆಯುವುದು.

ದೇವರನ್ನು ನಿರುಪಯುಕ್ತನನ್ನಾಗಿಯೂ ಜ್ಞಾನ ಭಕ್ತಿಗಳನ್ನು ಅರ್ಥಹೀನವನ್ನಾಗಿಯೂ ಮಾಡುವ ಈ ವಿಚಿತ್ರ ಸಿದ್ಧಾಂತವನ್ನು ವೇದಾಂತದ ಎಲ್ಲಾ ಆಚಾರ್ಯರೂ ತಿರಸ್ಕರಿಸುತ್ತಾರೆ. ಶಂಕರರ ಅಭಿಪ್ರಾಯದಲ್ಲಿ ಎಲ್ಲಾ ಕರ್ಮಗಳ ಮೂಲವು ಮಾಯೆಯಲ್ಲಿದೆ ಮತ್ತು ಈ ಮಾಯೆಯನ್ನು ನಿರ್ನಾಮಗೊಳಿಸಿದರೆ ಎಲ್ಲಾ ಕರ್ಮಗಳು [ಸ್ಥೂಲ ಹಾಗೂ ಸೂಕ್ಷ್ಮ] ನಾಶಹೊಂದಿ ಮನುಷ್ಯನು ಮುಕ್ತಿಯನ್ನು ಪಡೆಯುವನು. ಈ ಕಾರಣದಿಂದಲೇ ಅವರು ಕರ್ಮ ಹಾಗೂ ಜ್ಞಾನ ಒಟ್ಟಿಗೆ ಇರಲಾರವು ಎಂದು ವಾದಿಸುತ್ತಾರೆ. ಭಕ್ತಿಪಂಥದವರು ದೇವರ ಅನುಗ್ರಹದಿಂದ ಕರ್ಮಸಂಸ್ಕಾರಗಳು ನಾಶವಾಗುವುದೆಂದು ಹೇಳುತ್ತಾರೆ.

ಶಂಕರರ ಜೀವನದ ಇನ್ನೊಂದು ಧ್ಯೇಯ ಸಾಮಾಜಿಕ ಕಟ್ಟುಪಾಡುಗಳಿಂದ ಮುಕ್ತರಾದ ಸಂಪ್ರದಾಯಸ್ಥ ಕುಲದ, ಸಾಕ್ಷಾತ್ಕಾರಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಡುವ ಹಾಗೂ ಅದ್ವೈತ ತತ್ತ್ವಗಳನ್ನು ಸಾರುವ ಒಂದು ಸಂನ್ಯಾಸಿಗಳ ತಂಡವನ್ನು ನಿರ್ಮಿಸುವುದು. ವೇದವಿಹಿತವಾದ ಕರ್ಮಗಳು, ಯಜ್ಞ, ಯಾಗಾದಿಗಳು ಎಲ್ಲರಿಗೂ ಅನ್ವಯಿಸುವುದು ಹಾಗೂ ಅವುಗಳ ಅಲಕ್ಷ್ಯದಿಂದ ಪಾಪವುಂಟಾಗುವುದೆಂಬ ಮೀಮಾಂಸಕರ ಅಭಿಪ್ರಾಯದ ವಿರುದ್ಧ ಅವರು ಇಲ್ಲಿಯೂ ಹೋರಾಡಬೇಕಾಯಿತು. ಈ ಸಿದ್ಧಾಂತವೇನಾದರೂ ಪ್ರಚಲಿತವಾಗಿದ್ದಿದ್ದರೆ ನಾಸ್ತಿಕತೆ, ಮತಾಂಧತೆಗಳು ತಾಂಡವವಾಡಿ ಈ ದೇಶವನ್ನೂ ಕತ್ತಲೆಯುಗವು ಆವರಿಸಿ ಬಿಡುತ್ತಿತ್ತು. ಆದರೆ ಈ ಮಹಾಚಾರ್ಯರು ಆ ಮೀಮಾಂಸಕರ ಅಸಂಬದ್ಧ ಸಿದ್ಧಾಂತಗಳು ತಲೆಯೆತ್ತದಂತೆ ನುಚ್ಚುನೂರಾಗಿಸಿದರು. ಸಂನ್ಯಾಸಿಗಳನ್ನು ಸಾಂಪ್ರದಾಯಿಕ ವಿಧಿಗಳಿಂದ ಮುಕ್ತಗೊಳಿಸಿ ಸಂನ್ಯಾಸ ಧರ್ಮವನ್ನು ಹೆಚ್ಚು ಪ್ರಚಲಿತಗೊಳಿಸಿದರು.

ಆಧುನಿಕ ಸಾಮಾಜಿಕ ಹಾಗೂ ಆರ್ಥಿಕ ನಿಯಮಾನುಸಾರ ಶಂಕರರು ಕರ್ಮಕ್ಕೆ ಪ್ರಾಧಾನ್ಯವನ್ನು ಕೊಡದಿರುವುದು ಸಂಕುಚಿತ ಹಾಗೂ ಅವಾಸ್ತವಿಕ ಎಂದೆನಿಸುವುದು. ಆದರೆ ಕೇವಲ ಬ್ರಹ್ಮಸತ್ಯದ ಆತ್ಯಂತಿಕತೆಯನ್ನು ಪ್ರತಿಪಾದಿಸುವುದೇ ಅವರ ಉದ್ದಿಶ್ಯವಾಗಿತ್ತು ಎಂಬುದನ್ನು ಮರೆಯಬಾರದು. ಪ್ರಜ್ಞಾತೀತವಾದ ಬ್ರಹ್ಮವನ್ನು ಗ್ರಹಿಸಬಲ್ಲೆನೆಂಬ "ಅಹಂ"ಗೆ ಕೊಟ್ಟ ಪೆಟ್ಟು ಅದು. ಈ "ಅಹಂ" ತತ್ತ್ವವು ಸ್ವಯಂಜ್ಯೋತಿಯೂ, ಅನಂತವೂ ಆದ ಬ್ರಹ್ಮನ ಎದುರು ದೈನ್ಯದಿಂದ ನಿಲ್ಲುವಂತೆ ಮಾಡಿತು ಅದು. ಆಧ್ಯಾತ್ಮಿಕ ಅನುಭವ ಕೇವಲ ಭಗವಂತನು ತಾನೇ ಪ್ರಕಾಶಗೊಂಡಾಗ ಮಾತ್ರವೇ ಸಾಧ್ಯ.

ಶಂಕರರ ಅಭಿಪ್ರಾಯದಲ್ಲಿ ಕೇವಲ ಕರ್ಮವೊಂದೇ ಅಲ್ಲ, ಉಪಾಸನೆ (ಧ್ಯಾನ)ಯೂ ಕೂಡ ಸಾಕ್ಷಾತ್ಕಾರವನ್ನು ಕೊಡಲಾರದು ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಧ್ಯಾನ ಹಾಗೂ ಧಾರ್ಮಿಕ ಕ್ರಿಯಾವಿಧಿಗಳ ನಡುವೆ ವ್ಯತ್ಯಾಸವನ್ನು ಮಾಡಿ ಮೊದಲನೆಯದೇ ಎರಡನೆಯದಕ್ಕಿಂತ ಶ್ರೇಷ್ಠವೆಂದು ಅವರು ಹೇಳಿದರೂ, ಅವರ ದೃಷ್ಟಿಯಲ್ಲಿ ಧ್ಯಾನವೂ ಒಂದು ವಿಧದಲ್ಲಿ ಕರ್ಮವೇ. ಬ್ರಹ್ಮವನ್ನು ಅರಿಯದ ವ್ಯಕ್ತಿಯು ಏನೂ ಕೆಲಸ ಮಾಡದೆ ಕುಳಿತು, "ಈಗ ನಾನು ಏನೂ ಕೆಲಸ ಮಾಡುತ್ತಿಲ್ಲ; ಶಾಂತವಾಗಿದ್ದೇನೆ" ಎಂದರೆ ತಪ್ಪು. ಏಕೆಂದರೆ ಆತನು ನಿಷ್ಕ್ರಿಯೆಯನ್ನು ಮನಸ್ಸು ಮತ್ತು ದೇಹಕ್ಕೆ ಆರೋಪಿಸುತ್ತಿರುವನು, ಆತ್ಮನಿಗಲ್ಲ. ತ್ರಿಗುಣಾತ್ಮಕವಾದ ದೇಹ ಮನಸ್ಸುಗಳು ನಿರಂತರವಾಗಿ ಸೂಕ್ಷ್ಮ ಬದಲಾವಣೆಗಳನ್ನು ಹೊಂದುತ್ತಲೇ ಇರುತ್ತವೆ. ಬ್ರಹ್ಮವೊಂದೇ ಬದಲಾವಣೆ ಮತ್ತು ಕ್ರಿಯೆಗಳಿಂದ ಸಂಪೂರ್ಣ ಮುಕ್ತವಾಗಿರುವುದು. ಎಲ್ಲಿಯವರೆಗೆ ಬ್ರಹ್ಮಸಾಕ್ಷಾತ್ಕಾರವಾಗಿಲ್ಲವೋ ಅಲ್ಲಿಯವರೆಗೆ "ಕರ್ತೃತ್ವ" ಮತ್ತು "ಭೋಕ್ತೃತ್ವ"ದ ಅರಿವುಳ್ಳ ಎಲ್ಲ ಸ್ಥಿತಿಗಳೂ ಕರ್ಮದ ಪರಿಧಿಯೊಳಗೇ ಬರುವುವು. ಹಾಗೆಯೇ ಈ ದ್ವಂದ್ವಗಳಿಂದ ಮುಕ್ತನಾದ ಬ್ರಹ್ಮಜ್ಞಾನಿಯ ಎಲ್ಲ ಕರ್ಮಗಳು ಕರ್ಮದ ಪರಿಧಿಯಲ್ಲಿ ಇಲ್ಲವೆಂಬುದು ಗಮನಾರ್ಹ. (ನೋಡಿ, ಶಂಕರರ ಗೀತಾಭಾಷ್ಯ, ೪.೧೮ ಮತ್ತು ೨.೧೦) ಆತ್ಯಂತಿಕ ಸಾಕ್ಷಾತ್ಕಾರವು ಬ್ರಹ್ಮನ ಸ್ವಯಂ ಪ್ರಕಾಶದಿಂದ ಉಂಟಾಗುವುದು ಎಂಬ ಶಂಕರರ ಸಿದ್ಧಾಂತವನ್ನು ಉಳಿದೆಲ್ಲಾ ಆಚಾರ್ಯರು ಒಪ್ಪಿರುವರು ಮತ್ತು ಸ್ವಾಮಿ ವಿವೇಕಾನಂದರು ಅದಕ್ಕೆ **"ಸುಪ್ತ ದೈವತ್ವದ ಅಭಿವ್ಯಕ್ತಿ"** ಎಂಬ ಹೊಸ ನಿರೂಪಣೆ ನೀಡಿ, ಅದನ್ನೇ ಜೀವನ ತತ್ತ್ವವಾಗಿ ಪರಿವರ್ತಿಸಿದರು.

ಬ್ರಹ್ಮನ ಕೇವಲತ್ವವನ್ನು ಸ್ಥಾಪಿಸುವುದೇ ಶಂಕರರ ಮುಖ್ಯ ಪ್ರಯತ್ನ. ಅಸ್ಥಿರವೂ, ವೈವಿಧ್ಯವೂ ಆದ ಈ ದೃಶ್ಯಪ್ರಪಂಚದ ಸಮಸ್ಯೆಯನ್ನು ಬಗೆಹರಿಸಲು ತಾವೇ ಅಷ್ಟಾಗಿ ಮಹತ್ವವನ್ನು ನೀಡದ ಮಾಯೆ ಅಥವಾ ಅಜ್ಞಾನ ಎಂಬ ಅನಿರ್ವಚನೀಯ ರಹಸ್ಯತತ್ತ್ವವನ್ನು ಸ್ಥಾಪಿಸಿದರು. ಆದರೆ ಶಂಕರರ ತರುವಾಯ ಬಂದ ಸಿದ್ಧಾಂತಕಾರರು ಬ್ರಹ್ಮನಿಗಿಂತಲೂ ಮಾಯೆಗೇ ಹೆಚ್ಚು ಪ್ರಾಮುಖ್ಯವನ್ನು ನೀಡಿದರು. ಒಂದು ಸಾವಿರ ವರ್ಷಗಳಿಂದಲೂ ಈ ರೀತಿಯ ನಿಷೇಧಾತ್ಮಕ ಭಾವನೆಯಿಂದ ಜನರ ಮನಸ್ಸಿನ ಶಕ್ತಿಗುಂದಿ, ಈಗ ರಾಷ್ಟ್ರವು ಆ ಭಾವನೆಯನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಿದೆ.

(ಮುಂದುವರಿಯುತ್ತದೆ.)